ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 9-12-2020

## ವಿಧೇಯಕ ಪರಿಷತ್‌ನಲ್ಲಿ ಅಂಗೀಕಾರ | ಸಿದ್ಧತೆಯೊಂದಿಗೆ ಸಮರ್ಥ ವಾದ ಮಂಡಿಸಿದ ಸಚಿವ ಅಶೋಕ್

# ಭೂ ಸುಧಾರಣೆ ಬಿಲ್‌ಗೆ ಜೆಡಿಎಸ್ ಸಾಥ್

■ **ವಿಕ ಸುದ್ದಿಲೋಕ** ಬೆಂಗಳೂರು 9/12/20

ನೂತನ ಕೃಷಿ ಕಾಯಿದೆ ವಾಪಸ್ ಪಡೆಯಬೇಕೆಂದು ಆಗ್ರಹಿಸಿ ಮಂಗಳವಾರ ನಡೆದ ಭಾರತ್ ಬಂದ್ ದಿನವೇ, ಕೃಷಿ ಭೂಮಿ ಖರೀದಿಗೆ ಇದ್ದ ನಿರ್ಬಂಧ ರದ್ದುಪಡಿಸುವ ವಿವಾದಾತ್ಮಕ ಭೂ ಸುಧಾರಣೆ ತಿದ್ದುಪಡಿ ವಿಧೇಯಕಕ್ಕೆ ಜೆಡಿಎಸ್ ಬೆಂಬಲದೊಂದಿಗೆ ಮೇಲ್ಮನೆಯಲ್ಲಿ ಅನುಮೋದನೆ ಪಡೆಯುವಲ್ಲಿ ರಾಜ್ಯ ಬಿಜೆಪಿ ಸರಕಾರ ಯಶಸ್ವಿಯಾಗಿದೆ.

ಕಳೆದ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಒಪ್ಪಿಗೆ ಪಡೆದರೂ, ವಿಧಾನ ಪರಿಷತ್‌ನಲ್ಲಿ ಚರ್ಚೆ ಅಪೂರ್ಣಗೊಂಡಿತ್ತು. ಹಾಲಿ ಅಧಿವೇಶನದಲ್ಲಿ ಮೇಲ್ಮನೆಯಲ್ಲಿ ಮತ್ತೆ ಮಂಡಿಸಿ ಎರಡು ದಿನಗಳ ಕಾಲ ಸುದೀರ್ಘ ಚರ್ಚೆ ನಡೆಸಿದ ಬಳಿಕ ಮಂಗಳವಾರ ಸಂಜೆ ವಿಧೇಯಕವನ್ನು ಮತಕ್ಕೆ ಹಾಕಿದಾಗ ಬಿಜೆಪಿ ಹಾಗೂ ಜೆಡಿಎಸ್‌ನ 37 ಸದಸ್ಯರು ಬೆಂಬಲಿಸಿದರು. ಕಾಂಗ್ರೆಸ್‌ನ 20 ಸದಸ್ಯರು ಹಾಗೂ ಜೆಡಿಎಸ್‌ನ ಮರಿತಿಬ್ಬೇಗೌಡ ವಿರೋಧಿಸಿದರು. 16 ಮತಗಳ ಅಂತರದಿಂದ ವಿಧೇಯಕ ಅಂಗೀಕಾರ ಪಡೆದುಕೊಂಡಿತು ಎಂದು ಸಭಾಪತಿ ಘೋಷಿಸಿದರು. ಆಗ ಬಿಜೆಪಿ ಸದಸ್ಯರು ಮೇಜು ಕುಟ್ಟಿ ಹರ್ಷೋದ್ಗಾರ ಮಾಡಿದರು. ಬಿಜೆಪಿಯ ಸಿ.ಪಿ.ಯೋಗೇಶ್ವರ, ಸುನಿಲ್ ವಲ್ಯಾಪುರೆ ಗೈರುಹಾಜರಾಗಿದ್ದರು.


ವಿಧೇಯಕ ಜಾರಿಯಾದಲ್ಲಿ ಸಣ್ಣ ರೈತರು ಮತ್ತು ದಲಿತರ ಜಮೀನು ಬಲಾಢ್ಯರು, ಕಾರ್ಪೊರೇಟ್ ಕಂಪನಿಗಳ ಕೈವಶವಾಗಲಿದೆ ಎಂಬ ಆತಂಕ ರೈತ ನಾಯಕರಿಂದ ವ್ಯಕ್ತವಾಗಿತ್ತು. ಇದೇ ಕಾರಣಕ್ಕಾಗಿ ಪ್ರತಿಪಕ್ಷ ಕಾಂಗ್ರೆಸ್ ವಿಧೇಯಕವನ್ನು ವಿರೋಧಿಸಿತ್ತು. ಪ್ರತಿಪಕ್ಷಗಳ ಮನವೊಲಿಸಲು ಸ್ವತಃ ಸಿಎಂ ಯಡಿಯೂರಪ್ಪ ಮಂಗಳವಾರ ಕಲಾಪದಲ್ಲಿ ಪಾಲ್ಗೊಂಡು ವಿಧೇಯಕ ಜಾರಿಯಿಂದ ರೈತರಿಗೆ ತೊಂದರೆ ಆಗದು ಎಂಬ ಸಂದೇಶ ರವಾನಿಸಿದರು.

ಕಂದಾಯ ಸಚಿವ ಆರ್. ಅಶೋಕ್ ಕೂಡ ವಿಧೇಯಕಕ್ಕೆ ಒಪ್ಪಿಗೆ ಪಡೆಯಲು ಪ್ರತಿಪಕ್ಷಗಳು ಎತ್ತಿದ ಆಕ್ಷೇಪಗಳಿಗೆ ಸಮರ್ಥವಾಗಿ ಉತ್ತರ ನೀಡಿ ಗಮನ ಸೆಳೆದರು. ಇದಕ್ಕಾಗಿ ಅವರು ಸಾಕಷ್ಟು ಸಿದ್ಧತೆ ಮಾಡಿಕೊಂಡು ಸದನಕ್ಕೆ ಬಂದಂತಿತ್ತು. ಬೆಳಗ್ಗೆಯಿಂದ ಸಂಜೆಯವರೆಗೆ ಸುದೀರ್ಘ ಚರ್ಚೆ ವೇಳೆ ಪ್ರತಿಪಕ್ಷಗಳು ಸರಕಾರದ ಕಾಲೆಳೆದಾಗಲೆಲ್ಲ ಸಚಿವ ಅಶೋಕ್ ಜಾಣ್ಮೆಯಿಂದ ಉತ್ತರಿಸಿದರು.

**ಕೃಷಿ ಭೂಮಿ ಪರಭಾರೆಗೆ ಅವಕಾಶ ಇಲ್ಲ**

ವಿಧೇಯಕ ಚರ್ಚೆ ವೇಳೆ ಸದಸ್ಯರ ಆಕ್ಷೇಪಣೆಗಳಿಗೆ ಉತ್ತರಿಸಿದ ಅಶೋಕ್ ''ಭೂ ಕಂದಾಯ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆ ದೊರೆತಾಕ್ಷಣ ರೈತರ ಜಮೀನು ಪರಭಾರೆ ಆಗದು. ಕೈಗಾರಿಕೆಗೆ ಬೇಕಾಬಿಟ್ಟಿಯಾಗಿ ಭೂಮಿ ನೀಡುವುದಿಲ್ಲ. ಎಸ್‌ಸಿ/ಎಸ್ಟಿ ಸಹಿತ ಸಣ್ಣ ಹಿಡುವಳಿದಾರರ ಹಿತಾಸಕ್ತಿ ರಕ್ಷಿಸಲಾಗುವುದು. ನೀರಾವರಿ ಭೂಮಿಯನ್ನು ಕೈಗಾರಿಕೆಗೆ ಬಳಸುವಂತಿಲ್ಲ. ಹಾಲಿ ಅನುಸರಿಸುತ್ತಿರುವ ಕಾನೂನು ಪ್ರಕಾರವಾಗಿಯೇ ಜಮೀನು ಮಂಜೂರಾತಿ ಮುಂದುವರಿಯಲಿದೆ. ಈವರೆಗೆ ಕೈಗಾರಿಕೆಗೆ ಬಳಕೆಯಾಗಿರುವ ಜಮೀನು ಶೇ.0.87ರಷ್ಟು ಮಾತ್ರ. ನಾನಾ ಪಕ್ಷಗಳ ಮುಖಂಡರು ಕೂಡ ಸೆಕ್ಷನ್ 79ಎ ಮತ್ತು ಬಿ ನಿಯಮ ಬದಲಿಸುವಂತೆ ಆಗ್ರಹಿಸಿದ್ದಾರೆ. ಹೀಗಾಗಿ ವಿಧೇಯಕದಿಂದ ರೈತರಿಗೆ ಅನ್ಯಾಯವಾಗಲಿದೆ ಎಂಬ ಆರೋಪ ಸತ್ಯಕ್ಕೆ ದೂರ. ವ್ಯವಸಾಯ ಮಾಡುವ ಸ್ಥಳದಲ್ಲೇ ಕೃಷಿ ಸಂಬಂಧಿತ ಕೈಗಾರಿಕೆಗೆ ಅವಕಾಶ ಸಿಕ್ಕಲ್ಲಿ ಹೆಚ್ಚಿನ ಉದ್ಯೋಗವೂ ಸೃಷ್ಟಿಯಾಗಿ ರೈತರಿಗೆ ಅನುಕೂಲವಾಗಲಿದೆ,'' ಎಂದು ಸಮರ್ಥಿಸಿದರು.

ಚರ್ಚೆ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಕಾಂಗ್ರೆಸ್‌ನ ಹರಿಪ್ರಸಾದ್, ನಾರಾಯಣಸ್ವಾಮಿ, ಆರ್.ಬಿ. ತಿಮ್ಮಾಪುರ ಮತ್ತಿತರರು ವಿಧೇಯಕವನ್ನು ವಿರೋಧಿಸಿ ಮಾತನಾಡಿದರು.



### ಏನಿದು ಭೂ ಸುಧಾರಣಾ ವಿಧೇಯಕ?

**ಭೂ ಸುಧಾರಣಾ ವಿಧೇಯಕದ 79 (ಎ) ಮತ್ತು 79 (ಬಿ) ಅಧಿನಿಯಮ ಕೈಬಿಟ್ಟಿದ್ದರಿಂದ ಕೃಷಿ ಕುಟುಂಬದ ಹಿನ್ನೆಲೆ ಇಲ್ಲದವರೂ ಕೃಷಿ ಭೂಮಿ ಖರೀದಿಸಬಹುದು. ಜತೆಗೆ ಈ ಸಂಬಂಧ ಖರೀದಿದಾರನಿಗಿದ್ದ ಆದಾಯ ಮಿತಿ (25 ಲಕ್ಷ ರೂ.) ತೆಗೆದುಹಾಕಲಾಗಿದೆ. ಆದರೆ ಕೃಷಿ ಭೂಮಿ ಖರೀದಿ ಗರಿಷ್ಠ ಮಿತಿಯನ್ನು 108 ಎಕರೆಗಳಿಗೆ ಸೀಮಿತಗೊಳಿಸಲಾಗಿದೆ. 5 ಜನರ ಕುಟುಂಬವನ್ನು 10 ಯೂನಿಟ್ ಎಂದು ಪರಿಗಣಿಸಿ 54 ಎಕರೆ ಹಾಗೂ 10 ಜನರ ಕುಟುಂಬವನ್ನು 20 ಯೂನಿಟ್ ಎಂದು ಪರಿಗಣಿಸಿ 108 ಎಕರೆ ಖರೀದಿಗೆ ಅನುಮತಿ ನೀಡಲಾಗಿದೆ. ಎ ವರ್ಗದ ನೀರಾವರಿ ಭೂಮಿಯನ್ನು ಕೃಷಿ ಉದ್ದೇಶಕ್ಕಷ್ಟೇ ಬಳಸಬೇಕು. ಜತೆಗೆ ಕೃಷಿ ಉದ್ದೇಶಕ್ಕೆ ಮಾತ್ರ ಮಾರಾಟ ಮಾಡಬಹುದೆಂಬ ಷರತ್ತು ವಿಧಿಸಲಾಗಿದೆ.**

ಈ ವಿಧೇಯಕ ಜಾರಿಯಾದಲ್ಲಿ ಕೃಷಿ ನಾಶವಾಗುವುದು ನಿಶ್ಚಿತ. ತಾಯಿ-ಮಕ್ಕಳಂತಿರುವ ಭೂಮಿ ಹಾಗೂ ರೈತರ ಬಾಂಧವ್ಯಕ್ಕೆ ಇದು ಕೊಳ್ಳಿ ಇಡಲಿದೆ.

**- ಎಸ್.ಆರ್.ಪಾಟೀಲ್** ಪ್ರತಿಪಕ್ಷ ನಾಯಕ

ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗುವಂತೆ ನಿಯಮ ಬದಲಾವಣೆಯಿಂದ ಹಾಲಿ ವಿಧೇಯಕವು ಭೂ ಕಳ್ಳತನ ಕಾಯಿದೆ ಆಗಿದೆ. ರೈತರ ಮಕ್ಕಳು ಬಲಾಢ್ಯರ ಹೊಲದಲ್ಲಿ ಕಾರ್ಮಿಕರಾಗಿ ದುಡಿಯುವ ಕಾಲ ಬರಲಿದೆ.

**-ಮರಿತಿಬ್ಬೇಗೌಡ** ಜೆಡಿಎಸ್ ಸದಸ್ಯ

### ಕೈಗಾರಿಕೆಗೆ ಶೇ.1ಕ್ಕಿಂತ ಕಡಿಮೆ ಭೂಮಿ ಬಳಕೆ

1964ರಿಂದ ಈವರೆಗೆ ಕೆಐಎಡಿಬಿ 86 ಸಾವಿರ ಎಕರೆ ಹಾಗೂ ವಿಶೇಷ ಯೋಜನೆಗಳಿಗೆ 74 ಸಾವಿರ ಎಕರೆ ಭೂಸ್ವಾಧೀನ ಮಾಡಿಕೊಂಡಿದೆ. ಕೃಷಿ ಭೂಮಿಯಲ್ಲಿ ಶೇ.1ಕ್ಕಿಂತಲೂ ಕಡಿಮೆ ಜಮೀನು ಪಡೆಯಲಾಗಿದೆ. ಈ ಮಾಹಿತಿ ಅರಿಯದೆ ಕೈಗಾರಿಕೆ ಹೆಸರಿನಲ್ಲಿ ಜಮೀನು ಪರಭಾರೆ ಆಗುತ್ತಿದೆ ಎಂಬ ಆರೋಪಿಸುವುದು ಸಲ್ಲ ಎಂದು ಕೈಗಾರಿಕೆ ಸಚಿವ ಜಗದೀಶ್ ಶೆಟ್ಟರ್ ಹೇಳಿದರು.